## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 535/2019

**ಸಾಕ್ಷಿಯನ್ನು ದಿಃ 11.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಆರ್. ರಮೇಶ | ಪಿಡಬ್ಲ್ಯೂಃ2 |
| ತಂದೆಯ ಹೆಸರು | ಲೇಟ್ ರಾಮಶೆಟ್ಟಿ | |
| ವಯಸ್ಸು | 56 ವರ್ಷ | |
| ಉದ್ಯೋಗ | ಎ.ಎಸ್.ಐ ಹುಣಸೂರು ಪಟ್ಟಣ ಪೊಲೀಸ್ ಠಾಣೆ | |
| ವಾಸಸ್ಥಳ | ಕೆ.ಆರ್ ನಗರ. | |

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿ ಸಾಕ್ಷಿ ವಿಚಾರಣೆ**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 28.07.2022 ರಿಂದ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಕೇಸಿನ ಲ್ಲಿ ಆರೋಪಿಯ ಮೇಲೆ ನ್ಯಾಯಾಲಯ ಉದ್ಘೋಷಣೆ ವಾರೆಂಟ್ ಅನ್ನು ಹೊರಡಿಸಿದ್ದನ್ನು ದಿಃ 23.01.2026 ರಂದು ಸ್ವೀಕರಿಸಿರುತ್ತೇನೆ. ಅದರಲ್ಲಿ ದಿಃ 23.01.2026 ರಂದು ಮೈಸೂರು ಜಿಲ್ಲೆ, ಹುಣಸೂರು ಪಟ್ಟಣ, ಸದಾಶಿವನಕೊಪ್ಪಲಿನಲ್ಲಿ ಇರುವ ಮನೆ ನಂ 292 ನ ಆರೋಪಿ ಸುರೇಶ್ ಬಿ. ಬಿನ್ ಭದ್ರಯ್ಯ ರವರು ವಾಸ ಇದ್ದ ಮನೆ ಮುಂಭಾಗ ಪಂಚಾಯಿತಿದಾರರಾದ ಸತೀಶ್ ಮತ್ತು ಶ್ರೀನಿವಾಸ್ ರವರ ಸಮಕ್ಷಮ ನ್ಯಾಯಾಲಯದ ಸಿಸಿ ನಂ.535/2019 ರಲ್ಲಿ ಆರೋಪಿ ಸುರೇಶ್ ಬಿ. ಬಿನ್ ಭದ್ರಯ್ಯ ರವರಿಗೆ ಉದ್ಘೋಷಣೆಯನ್ನು ಹೊರಡಿಸಿದ್ದು, ಸದರಿ ಆರೋಪಿಯು ಈಗ್ಗೆ 6

ತಿಂಗಳ ಹಿಂದೆ ಮನೆ ಖಾಲಿ ಮಾಡಿಕೊಂಡು ಸದರಿ ರವರ ಮನೆಯನ್ನು ಪುಟ್ಟಮ್ಮ ರವರಿಗೆ ಬಾಡಿಗೆಗೆ ಕೊಟ್ಟು ಖಾಲಿ ಮಾಡಿಕೊಂಡು ಹೋದವರು ಎಲ್ಲಿಗೆ ಹೋಗಿರುತ್ತಾರೆ ಗೊತ್ತಿಲ್ಲ ಎಂದು ಗ್ರಾಮಸ್ಥರು ಮತ್ತು ಪಂಚಾಯಿತದಾರರು ತಿಳಿಸಿರುತ್ತಾರೆ .

ಸದರಿ ಆರೋಪಿ ಪತ್ತೆ ಆದಲ್ಲಿ ದಿಃ 18.02.2026 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಪಂಚಾಯಿತಿದಾರರಾಲ್ಲಿ ಉದ್ಘೋಷಣೆಯ ವಾರೆಂಟ್ ಅನ್ನು ಆರೋಪಿ ಸುರೇಶ್ ಬಿ. ಬಿನ್ ಭದ್ರಯ್ಯ ರವರು ವಾಸ ಇದ್ದ ಮನೆಯ ಬಾಗಿಲಿಗೆ ಅಂಟಿಸಲಾಯಿತು, ಇನ್ನೊಂದು ಪ್ರತಿಯನ್ನು ಹುಣಸೂರು ನಗರ ಸಭೆಯ ನೊಟೀಸು ಬೋರ್ಡ ಅಲ್ಲಿ ಅಂಟಿಸಲಾಯಿತು, ನಂತರ ಸದಾಶಿನಕೊಪ್ಪಲು ಗ್ರಾಮದಲ್ಲಿ ಟಾಂ ಟಾಂ ರೀತಿಯಲ್ಲಿ ಉದ್ಘೋಷಣೆಯನ್ನು ಏರು ಧ್ವನಿಯಲ್ಲಿ ಸಾರಿ ಸಾರಿ ಹೇಳಲಾಯಿತು. ಮತ್ತೊಂದು ಪ್ರತಿಯನ್ನು ನ್ಯಾಯಾಲಯದ ನೊಟೀಸು ಬೋರ್ಡ್ ಅಲ್ಲಿ ಅಂಟಿಸಿ ಉದ್ಘೋಷಣೆಯನ್ನು ಕಾರ್ಯಗತಗೊಳಿಸಲಾಯಿತು.

ಬೆಳಿಗ್ಗೆ 11 ರಿಂದ 12 ಗಂಟೆ ವರೆಗೆ ಮಹಜರ್ ಜರುಗಿಸಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು 6 (ಎ) ಎಂದು, ಪಂಚರಾದ ಸತೀಶ್ ಮತ್ತು ಶ್ರೀನಿವಾಸ್ ಸಹಿಗಳನ್ನು ಕ್ರಮವಾಗಿ ನಿಪಿ. 6(ಬಿ ಮತ್ತು ಸಿ ) ಎಂದು ಗುರುತಿಸಲಾಯಿತು. ಉದ್ಘೋಷಣಾ ಸಮಯದಲ್ಲಿ 2 ಪೋಟೊಗಳನ್ನು ನನ್ನ ಮೊಬೈಲ್ ನಲ್ಲಿ ತೆಗೆದಿದ್ದು, ಪ್ರಿಂಟ್ ತೆಗೆದ 2 ಪೋಟೊಗಳನ್ನು ನಿಪಿ.7 ಮತ್ತು 8 ಎಂದು ಗುರುತಿಸಲಾಯಿತು.

ಆರೋಪಿತನ ಹೆಸರಿನಲ್ಲಿ ಸ್ಥಿರಾಸ್ಥಿ ಇರುವ ಬಗ್ಗೆ ಅಟ್ಯಾಚ್ ಮೆಂಟ್ ವಾರೆಂಟ್ ಹೊರಡಿಸಿದ್ದು, ಹುಣಸೂರು ನಗರ ಸಭೆಗೆ ಮನವಿ ಕೊಟ್ಟು, ವರದಿಯನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯಲ್ಲಿ ಆರೋಪಿತನ ಹೆಸರಿನಲ್ಲಿ ಯಾವುದೆ ಸ್ಥಿರ ಮತ್ತು ಚರಾಸ್ಥಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ . ಸದರಿ ವರದಿಯನ್ನು ನಿಪಿ. 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ತಲೆ ಮರಿಸಿಕೊಂಡಿರುತ್ತಾನೆ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.ಹುಣಸೂರು.